ಕಾರ್ಯನಿರ್ವಹಿಸಲು ತೆಗೆದುಕೊಳ್ಳಲಾಗಿದ್ದು ಯಾರಿಗೂ ಅವರು ಕೆಸದಿಂದ ಬಿಡುಗಡೆಯಾದ ಸಮಯದಲ್ಲಿ ಪಡೆಯುತ್ತಿದ್ದ ವೇತನಕ್ಕಿಂತ ಹೆಚ್ಚಿಗೆ ವೇತನವನ್ನು ನೀಡುತ್ತಿರುವುದಿಲ್ಲ.

1.	ಶ್ರೀ ಜೆ.ಬಿ. ತಾರಾನಾಥ್ –	ವ್ಯವಸ್ಥಾಪಕ ನಿರ್ದೇಶಕರ ಕಾರಿನ ಚಾಲಕ
2.	ಶ್ರೀ ಥೆರೇಸ್ ರಾಜ್ –	ಎಂ.ಡಿ. ಅವರ ಕಛೇರಿಯ ಅರ್ಧಲ್ಲಿ ಜವಾನ ಹಾಗೂ ಅಡಿಗೆಯವ
3.	ಶ್ರೀ ಜಯಕುಮಾರ್ ಪಿ.–	ಚನ್ನೈ ಮಾರಾಟ ಕಛೇರಿಯ ರೆಸಿಡೆಂಟ್ ಇಂಜಿನಿಯರ್ ಸಂಸ್ಥೆಗೆ ಬರಬೇಕಾದ ಬಾಕಿ ವಸೂಲು ಮಾಡಲು ಇವರನ್ನು ನೇಮಿಸಿಕೊಳ್ಳಲಾಗಿದೆ.
4.	ಶ್ರೀ ಎಂ.ಎಲ್.ಮಹೇಶ್ –	ಪ್ರತ್ಯೇಕಗೊಂಡಿರುವ ಉದ್ಯೋಗಿಗಳ ಪಿ.ಎಫ್. ಹಣ ಇತ್ಯರ್ಥ ಪಡಿಸಲು ಹಾಗೂ ಟ್ರಸ್ಟ್‌ನ ಲೆಕ್ಕ ಪತ್ರ ಅಂತಿಮಗೊಳಿಸಲು ಪಿ.ಎಫ್ ಟ್ರಸ್ಟ್‌ಗೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಉ) ಉಳಿದ ಉದ್ಯೋಗಿಗಳ ಪಿ.ಎಫ್. ಹಣವನ್ನು ಶೀಘ್ರದಲ್ಲೇ ಇತ್ಯರ್ಥಪಡಿಸಲಾಗುವುದು. ಉದ್ಯೋಗಿಗಳ ಇತರೆ ಬಾಕಿಗಳನ್ನು ಉಚ್ಚ ನ್ಯಾಯಾಲಯದ ಮುಂದೆ ಬಾಕಿಯಿರುವ ಅಮಾಪನ ಪ್ರಕ್ರಿಯೆಗಳಿಗೆ ಒಳಪಟ್ಟು ಕಾನೂನಿನ ಪ್ರಕಾರ ಪಾವತಿ ಮಾಡಲಾಗುವುದು.

ಊ) ಇಲ್ಲಾ

ವ್ಯವಸ್ಥಾಪಕ ನಿರ್ದೇಶಕರು ಹಿರಿಯ ಶ್ರೇಣಿಯ ಭಾ.ಆ.ಸೇ. ಅಧಿಕಾರಿಗಳಾಗಿದ್ದು, ಇಂತಹ ದೂರುಗಳ ಬಗ್ಗೆ ಅವರ ಗಮನ ಹರಿಸಿ ಅವಶ್ಯಕ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಾರೆ.

ಎನ್.ಜಿ.ಇ.ಎಫ್. ನಲ್ಲಿ ಸ್ವಯಂ ನಿವೃತ್ತಿ ಹೊಂದಿದ ನೌಕರರಿಗೆ ಹಣ ಬಿಡುಗಡೆ ಮಾಡುವುದು

3656 (4366) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ಎಷ್ಟು ನೌಕರರು ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದಾರೆ.

ಆ) ಈ ರೀತಿ ಸ್ವಯಂ ನಿವೃತ್ತಿ ತೆಗೆದುಕೊಂಡಿರುವವರಿಗೆಲ್ಲಾ ನೀಡಬೇಕಾದ ಹಣವನ್ನು ನೀಡಬೇಕಾಗಿದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ಹಾಗೂ ಬಂಡವಾಳ ಹಿಂತೆಗೆಯುವಿಕೆ ಸಚಿವರು)

ಅ) 4892 ನೌಕರರು ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದಾರೆ.

ಆ) ಶೇ. 80ರ ಸ್ವಯಂ ನಿವೃತ್ತಿಯ ಯೋಜನೆಯಡಿಯ ಫಲಾನುಭವಿಗಳಿಗೆ ಎನ್.ಜಿ.ಇ.ಎಫ್. ಸಂಸ್ಥೆಯು ಮುಚ್ಚಿರುವುದರಿಂದ ಒಮ್ಮತದ ಒಟಂಬಡಿಕೆ (ಓಟಿಎಸ್) ನೀಡುವ ಬಗ್ಗೆ ಸರ್ಕಾರದ

ಪರಿಶೀಲನೆಯಲ್ಲಿದೆ. ಸ್ವಯಂ ನಿವೃತ್ತಿ ಯೋಜನೆಯನ್ವಯ ಸ್ವಯಂ ನಿವೃತ್ತಿ ಪಡೆದ ಉಳಿದ ಉದ್ಯೋಗಿಗಳಿಗೆ ಈಗಾಗಲೇ ವಿಮುಕ್ತಿ ಸೌಲಭ್ಯಗಳ ಪರಿಹಾರವನ್ನು ಪೂರ್ಣವಾಗಿ ಪಾವತಿಸಿದೆ. ಉಳಿದಂತೆ ಸೂಪರ್ ಅನ್ಯುಯೇಷನ್ ವಂತಿಗೆ, ತುಟ್ಟಿಭತ್ಯೆ ಮತ್ತು ವೇತನ ಬಡ್ತಿಯ ಬಾಕಿಯನ್ನು ರಾಜ್ಯ ಉಚ್ಚನ್ಯಾಯಾಲಯದ ಒಪ್ಪಿಗೆಯೊಂದಿಗೆ ಸಂಸ್ಥೆಯ ಆಸ್ತಿ ವಿಲೇವಾರಿಯಿಂದ ಬಂದ ಹಣದಲ್ಲಿ ಪಾವತಿಸಬೇಕಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳು

3665 (4172) : ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಇವೆ? ತಾಲ್ಲೂಕುವಾರು ವಿವರ ನೀಡುವುದು?

ಆ) ಕಳೆದ 3 ವರ್ಷಗಳಿಂದ ಪ್ರತಿ ತಾಲ್ಲೂಕಿಗೆ ಮಕ್ಕಳ ಪೌಷ್ಟಿಕ ಆಹಾರಕ್ಕೆ ಹಾಗೂ ಇತರೇ ವೆಚ್ಚಕ್ಕಾಗಿ ಖರ್ಚುಮಾಡಿದ ಹಣವೆಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 1226 ಅಂಗನವಾಡಿ ಕೇಂದ್ರಗಳು

ತಾಲ್ಲೂಕಿನ ಹೆಸರು	ಅಂಗನವಾಡಿ ಕೇಂದ್ರಗಳ ಸಂಖ್ಯೆ
ಚಿಕ್ಕಮಗಳೂರು	298
ಕಡೂರು	259
ಕೊಪ್ಪ	100
ಮೂಡಿಗೆರೆ	161
ಎನ್.ಆರ್.ಪುರ	68
ಶೃಂಗೇರಿ	100
ತರೀಕೆರೆ	240
ಒಟ್ಟು	**1226**

ಆ) ಖರ್ಚು ಮಾಡಿದ ಹಣದ ವಿವರ ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕಳೆದ ಮೂರು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಹಾರಕ್ಕಾಗಿ ಮತ್ತು ಇತರೆ ವೆಚ್ಚಕ್ಕಾಗಿ ಮಾಡಿದ ಹಣದ ತಾಲ್ಲೂಕುವಾರು ವಿವರ

ತಾಲ್ಲೂಕು	2000–01		2001–02		2002–03	
	ಆಹಾರ	ಇತರೆ	ಆಹಾರ	ಇತರೆ	ಆಹಾರ	ಇತರ
1. ಕಡೂರು	75–40	50–92	59–46	15–25	60–85	70–51
2. ಕೊಪ್ಪ	16.08	19–75	15–68	19–73	15–91	26–63
3. ಮೂಡಿಗೆರೆ	22–85	25–80	18–46	13–07	18–84	38–36
4. ಶೃಂಗೇರಿ	10–27	18–84	12–57	20–11	11–06	28–38
5. ಚಿಕ್ಕಮಗಳೂರು	63–34	65–84	62–43	67–19	48–00	88–01